

ಪ್ರತಿ ಮನೆಯಲ್ಲೂ ಜೀವತಳೆಯುವ ಪಟಚಿತ್ರಗಳು



# ರಘುರಾಜಪುರ

## ಪಟಚಿತ್ರ ಕಲಾವಿದರ ಪುಟ್ಟ ಹಳ್ಳಿ

**ಒಡಿಶಾದ ರಘುರಾಜಪುರದಲ್ಲಿನ ಪ್ರತಿ ಮನೆಯಲ್ಲೂ ಪಟಚಿತ್ರ ಬಿಡಿಸುವ ಕಲಾವಿದರಿದ್ದಾರೆ. ಶತಮಾನಗಳ ಹಿಂದಿನ ಚಿತ್ರಕಲೆಯನ್ನು ಈಗಲೂ ನೇವರಿಸಿಕೊಂಡು ಬಂದಿರುವ ಇವರಿಗೆ ಕಲೆಯೇ ಜೀವ–ಜೀವನ.**

■ ನಿರಂಜನ ವಾನಳ್ಳಿ

ಒಡಿಶಾ ರಾಜ್ಯದಲ್ಲಿ ಜಗನ್ನಾಥನ ಪುರಿಯಿಂದ ಭುವನೇಶ್ವರದತ್ತ ಸಾಗುವ ರಾಷ್ಟ್ರೀಯ ಹೆದ್ದಾರಿ 316ರಲ್ಲಿ ಸಿಗುವ ಚಂದನಪುರದಿಂದ ಬಲಕ್ಕೆ ಒಂದೂವರೆ ಕಿಲೋಮೀಟರು ಒಳಗೆ ಸಾಗಿದರೆ ಬಂದು ಸೇರುವ ಊರು ರಘುರಾಜಪುರ. ಇದು ಭಾರ್ಗವಿ ನದಿ ದಂಡೆಯ ಮೇಲಿದೆ. ಕಲಾವಿದರೇ ನೆಲೆಸಿರುವ ದೇಶದ ಏಕೈಕ ಹಳ್ಳಿ ಎಂಬ ಹೆಗ್ಗಳಿಕೆ ಇದರದ್ದು.

ಒಡಿಸ್ಸಿಯ ಮಹಾನ್ ಗುರು ಪದ್ಮವಿಭೂಷಣ ಕೇಳುಚರಣ ಮಹಾಪಾತ್ರ, ಒಡಿಸ್ಸಿ ನೃತ್ಯ ಕಲೆಯ ಪೂರ್ವ ರೂಪವೆನಿಸಿರುವ ಗೋಟಿಪುವಾ ಪ್ರಕಾರದ ಹಿರಿಯ ಕಲಾವಿದ ಪದ್ಮಶ್ರೀ ಮಾಗುನಿ ಚರಣದಾಸ್ ಈ ಹಳ್ಳಿಯವರು. ಸಂಬಾಲಪುರಿಯ ಟಸ್ಸರ್ ರೇಷ್ಮೆ ಸೀರೆಗಳಿಗೆ ನೈಜವೆನಿಸುವ ಚಿತ್ರ ಬಿಡಿಸುವ ಕಲಾವಿದರು ರಘುರಾಜಪುರದವರು. ಕಲ್ಲು, ಮರದ ಕೆತ್ತನೆಗಳಿಗೆ ಹೆಸರಾದವರು, ಮುಖವಾಡಗಳು, ಆಟದ ಸಾಮಾನುಗಳನ್ನು ಮಾಡುವುದರಲ್ಲಿ ಎತ್ತಿದ ಕೈ ಎನಿಸಿರುವವರು ರಘುರಾಜಪುರದ ಕಲಾವಿದರು. ಆಲದ ಎಲೆಯ ಮೇಲೆ ಕೊರೆಯುವ ಚಿತ್ರಗಳಿಗೂ ಈ ಊರು ಖ್ಯಾತಿ ಪಡೆದಿದೆ.

ನಾವು ರಘುರಾಜಪುರಕ್ಕೆ ಕಾಲಿಡುವ ಹೊತ್ತಿಗೆ ಸಂಜೆಯಾಗಿತ್ತು. ಮಳೆ ಹನಿಯತೊಡಗಿತ್ತು. ಒದ್ದೆಯಾಗುವುದರಿಂದ ತಪ್ಪಿಸಿಕೊಳ್ಳಲು ಸಿಕ್ಕ ಒಂದು ಮನೆಯನ್ನು ಹೊಕ್ಕರೆ, ಅಲ್ಲಿ ಓರ್ವ ಹಿರಿಯರು ರಟ್ಟಿನಂಥ ಭಿತ್ತಿಯ ಮೇಲೆ ಚಿತ್ರ ರಚಿಸುತ್ತಿದ್ದರು. ಗಮನಿಸಿದರೆ, ಅಲ್ಲಿಯ ಪ್ರತಿಯೊಂದು ಮನೆಯಲ್ಲೂ ಒಬ್ಬರಾದರೂ ಹೀಗೆ ಪಟಚಿತ್ರ ಬಿಡಿಸುತ್ತ ಕುಳಿತಿದ್ದರು. ಹತ್ತಾರು ಬಗೆಯ ನಿಬ್ಬು ಹಾಗೂ ಬ್ರಶ್‌ಗಳನ್ನು ಹರಡಿಕೊಂಡಿದ್ದರು. ಅದರಲ್ಲಿ ರಾಮಾಯಣವಿತ್ತು. ಗಣಪನ ವಿವಿಧ ಭಂಗಿಗಳಿದ್ದವು. ಅತಿ ಹೆಚ್ಚಾಗಿ ಕೃಷ್ಣ–ರಾಧೆಯರ ಚಿತ್ರಗಳು ಕಲಾವಿದನ ಕಲ್ಪನೆಗನುಸಾರವಾಗಿ ಪ್ರತಿ ಮನೆಯಲ್ಲೂ ಜೀವತಳೆಯುತ್ತಿದ್ದವು.

ರಘುರಾಜಪುರದಲ್ಲಿ ಸುಮಾರು ಇನ್ನೂರು ಕುಟುಂಬಗಳು, ನಾನೂರಕ್ಕೂ ಹೆಚ್ಚು ಜನ ಅಪ್ಪ–

